# ಕರ್ನಾಟಕ ವಿಧಾನ ಪರಿಷತ್ತು

## ಗುರುವಾರ, 28ನೇ ನವೆಂಬರ್ 2013

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಪೂರ್ವಾಹ್ನ 11 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಡಿ.ಹೆಚ್. ಶಂಕರಮೂರ್ತಿ) ಅವರು**

**ಪೀಠದಲ್ಲಿ ಉಪಸ್ಥಿತರಿದ್ದರು**

**(ಸದನ ಆರಂಭವಾದಾಗ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಹೊರತುಪಡಿಸಿ ಭಾರತೀಯ ಜನತಾ ಪಕ್ಷದ ಮಾನ್ಯ ಸದಸ್ಯರೆಲ್ಲರೂ ಕಪ್ಪು ಪಟ್ಟಿಯನ್ನು ಧರಿಸಿ ಸದನದ ಮುಂದಿನ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)**

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಕಬ್ಬಿನ ಬೆಲೆ ನಿಗದಿಗೆ ಒತ್ತಾಯಿಸಿ ಕಬ್ಬು ಬೆಳೆಗಾರರು ನಡೆಸುತ್ತಿರುವ ಚಳುವಳಿಗೆ ಸಂಬಂಧಿಸಿದಂತೆ ಈ ಸದನದಲ್ಲಿ ಒಂದಷ್ಟು ಚರ್ಚೆಗಳನ್ನು ನಾವು ಈಗಾಗಲೇ ಮಾಡಿದ್ದೇವೆ. ದುರ್ದೈವವೆಂದರೆ ನಮ್ಮ ಒಬ್ಬ ರೈತ ಅವನ ಹಕ್ಕಿನ ಹೋರಾಟಕ್ಕೋಸ್ಕರ ಇಡೀ ರಾಜ್ಯದ ರೈತರ ಭಾವನೆಗಳನ್ನು ಅವನ ಮನಸ್ಸಿನಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗದೆ, ಇಂತಹ ಸಂದರ್ಭದಲ್ಲಿ ಏನಾದರೂ ಒಂದು ಹಂತಕ್ಕೆ ಹೋಗಿ ಈ ಸರ್ಕಾರದ ಮನವೊಲಿಸುವುದಕ್ಕೆ ಏನಾದರೊಂದನ್ನು ಮಾಡಬೇಕು, ಇನ್ನುಳಿದ ಬೆಳೆಗಾರರ ಹಿತರಕ್ಷಣೆಗಾಗಿ ನಾನು ಹುತಾತ್ಮನಾದರೂ ಪರವಾಗಿಲ್ಲ ಎಂದು ನಿರ್ಧರಿಸಿ ಇಡೀ ರಾಜ್ಯದ ರೈತರ ಪರವಾಗಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಈ ಸರ್ಕಾರದ ಮೇಲೆ ಒತ್ತಡ ಹಾಕುವಂತಹ ಪ್ರಯತ್ನವನ್ನು ಮಾಡಿದ್ದಾನೆ. ಆದರೆ ಇದರಿಂದ ಸರ್ಕಾರದ ಮೇಲೆ ಅಷ್ಟೇನು ಪರಣಾಮವಾದಂತೆ ಕಂಡುಬರುತ್ತಿಲ್ಲ.

ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ಜನ ಆತ್ಮಹತ್ಯೆ ಮಾಡಿಕೊಳ್ಳುವುದು ಒಂದು ರೀತಿಯಾದರೆ, ಈ ರೀತಿ ಸಾರ್ವಜನಿಕವಾಗಿ ಪ್ರತಿಭಟನಾ ರ್‍ಯಾಲಿಯಲ್ಲಿ ಭಾಗವಹಿಸಿ, ಅದೂ ಸಹ ಸುವರ್ಣ ವಿಧಾನಸೌಧದಂತಹ ಶಕ್ತಿಸೌಧದ ಎದುರಿನಲ್ಲಿಯೇ ಪ್ರತಿಭಟನೆಗಳನ್ನು ಮಾಡಿದ್ಯಾಗ್ಯೂ ಸಹ ಸರ್ಕಾರದಿಂದ ನಿರೀಕ್ಷೆ ಮಾಡಿದಂತಹ ರೀತಿಯಲ್ಲಿ ಉತ್ತರಗಳು ಬರದಿದ್ದಾಗ, ಮೂರು ದಿವಸಗಳಿಂದ ನಿರಂತರವಾಗಿ ಇಂತಹ ಒಂದು ಸತ್ಯಾಗ್ರಹ– ಹೋರಾಟಗಳನ್ನು ಮಾಡಿ, ಕೊನೆಗೆ ಸರ್ಕಾರವನ್ನು ಮಣಿಸಬೇಕು ಎನ್ನುವಂತಹ ಒಂದು ಪ್ರಯತ್ನಕ್ಕಾಗಿ ಆತ ಬಲಿದಾನವಾಗಿದ್ದಾನೆ ಎಂದು ನಾನಾದರೂ ಭಾವಿಸಿದ್ದೇನೆ.

ಮಾನ್ಯ ಸಭಾಪತಿಯವರೇ, ನಾನು ಈ ವಿಚಾರದಲ್ಲಿ ಹೆಚ್ಚು ಸುದೀರ್ಘವಾಗಿ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ಎಲ್ಲಿಯೋ ಒಂದು ಹಂತದಲ್ಲಿ ಇವೊತ್ತು ಸರ್ಕಾರದ ಆದೇಶಗಳಿಗೆ ಕೂಡ ಕವಡೆ ಕಾಸಿನ ಕಿಮ್ಮತ್ತನ್ನು ಸಕ್ಕರೆ ಕಾರ್ಖಾನೆಯವರು ಕೊಡುತ್ತಿಲ್ಲ. ಇನ್ನು ಸರ್ಕಾರದ ಘೋಷಣೆಗಳು ಘೋಷಣೆಗಳಾಗಿಯೇ ಉಳಿಯುವಂತಹ ಪರಿಸ್ಥಿತಿಗಳು ಇವೊತ್ತು ರಾಜ್ಯದಲ್ಲಿ ನಿರ್ಮಾಣವಾಗುತ್ತಿರುವುದನ್ನು ಕೂಡ ನಾವು ನೋಡುತ್ತಿದ್ದೇವೆ. ಸಕ್ಕರೆ ಕಾರ್ಖಾನೆಗಳ ಮಾಲೀಕರು ಕೊಟ್ಟಂತಹ ಎರಡು–ಮೂರು ಒಪ್ಪಂದ ಪತ್ರಗಳನ್ನು ನಾನು ಮೊನ್ನೆ ತಮ್ಮ ಮುಂದೆ ಹಾಜರುಪಡಿಸಿದ್ದೆ. ಇದೇ 23ನೇ ತಾರೀಖಿನಂದು ಸರ್ಕಾರದ ಆದೇಶವಾದ ಮೇಲೆ ಕೂಡ ಸಕ್ಕರೆ ಕಾರ್ಖಾನೆಗಳ ಮಾಲೀಕರು ಕಬ್ಬು ಬೆಳೆಗಾರರಿಗೆ ಟನ್‌ಗೆ ₹ 2000/– ಕ್ಕಿಂತ ಹೆಚ್ಚಿನ ಬೆಲೆಗೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಅವರನ್ನು ಹೆದರಿಸಿ, ಬೆದರಿಸಿದ್ದಾರೆ. ಸಾಲ–ಸೋಲ ಮಾಡಿ ಹಣ ತಂದು, ಇಡೀ ವರ್ಷ ತಮ್ಮ ರಕ್ತವನ್ನು ಬೆವರನ್ನಾಗಿ ಪರಿವರ್ತಿಸಿ ಕಷ್ಟಪಟ್ಟು ಮಾಡಿದ ಬೇಸಾಯದಿಂದ ಬಂದಂತಹ ಕಬ್ಬು ಸಕಾಲದಲ್ಲಿ ಕಟಾವಾಗಬೇಕೆಂದು ಎಲ್ಲ ರೈತರು ಬಯಸುತ್ತಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆಯ ಧಾರಣೆಯಲ್ಲಿ ಆಗಿರುವಂತಹ ಕುಸಿತ ಇರಬಹುದು, ಅಲ್ಲಿ ಆದಂತಹ ಇನ್ನಿತರ ವ್ಯತ್ಯಾಸಗಳಿರಬಹುದು ಇಂತಹ ಎಲ್ಲ ಸಂದರ್ಭಗಳಲ್ಲಿಯೂ ಸರ್ಕಾರಗಳು ರೈತರ ರಕ್ಷಣೆಗೆ ಬರಬೇಕು ಎನ್ನುವಂತಹ ಮಾತು ಇವೊತ್ತಿನದಲ್ಲ, ಹಿಂದಿನಿಂದಲೂ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಂತೆಯೇ ರಾಜ್ಯಗಳಲ್ಲಿ ಕೂಡ ನಡೆದುಕೊಂಡು ಬಂದಿರುವಂತಹ ಸಂಪ್ರದಾಯವಾಗಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ರೈತರ ಚಳುವಳಿಯನ್ನು ನಿರ್ಲಕ್ಷ ಮಾಡದೆ ತಕ್ಷಣವೇ ಪರಿಹಾರೋಪಾಯವನ್ನು ಕಂಡುಕೊಂಡಿದ್ದರೆ ಖಂಡಿತವಾಗಿಯೂ ಆ ರೈತನನ್ನು ಬದುಕಿಸುವುದಕ್ಕೆ ಸಾಧ್ಯವಿತ್ತು ಎನ್ನುವಂತಹ ಮಾತನ್ನು ನಾನಷ್ಟೇ ಅಲ್ಲ, ಈ ರಾಜ್ಯದಲ್ಲಿರುವಂತಹ ಪ್ರತಿಯೊಬ್ಬ ವ್ಯಕ್ತಿ ಕೂಡ, ಬುದ್ಧಿಜೀವಿಗಳಿಂದ ಹಿಡಿದು ಶ್ರಮಜೀವಿಗಳವರೆಗೆ ಪ್ರತಿಯೊಬ್ಬರು ಹೇಳುವಂತಹ ಸಂಗತಿಯಾಗಿದೆ. ಇಂತಹ ಒಂದು ಸಂದರ್ಭದಲ್ಲಿ ನಾವು ಸರ್ಕಾರವನ್ನು ಆಗ್ರಹಿಸಿದ್ದೇವೆ,

ರೈತರಿಗೆ ಪ್ರತಿ ಟನ್‌ಗೆ ಕನಿಷ್ಠ ₹ 1,000/– ವನ್ನು ಬೆಂಬಲ ಬೆಲೆಯನ್ನಾಗಿ ಕೊಡಬೇಕು, ಯಾವುದೇ ರೀತಿಯ ವ್ಯತ್ಯಾಸಗಳಾದರೂ ಕನಿಷ್ಠ ಪಕ್ಷ ಒಂದು ಟನ್‌ಗೆ ₹ 3,000/– ದಷ್ಟಾದರೂ ಕಬ್ಬು ಬೆಳೆಗಾರರಿಗೆ ಬೆಲೆ ಸಿಗಬೇಕು ಎನ್ನುವಂತಹ ಭಾವನೆಗಳನ್ನು ವ್ಯಕ್ತಪಡಿಸಿದ್ದೇವೆ.

ಮಾನ್ಯ ಸಭಾಪತಿಯವರೇ, ಬೇರೆ ಬೇರೆ ಕಾರಣಗಳಿಂದಾಗಿ Cost of cultivation ನಲ್ಲಿ ಎಷ್ಟು ಹೆಚ್ಚಳವಾಗಿದೆ ಎಂಬುದನ್ನು ನಾನು ಈಗಾಗಲೇ ಸಾಕಷ್ಟು ಸುದೀರ್ಘವಾಗಿ ವಿವರಿಸಿದ್ದೇನೆ. ಆದ್ದರಿಂದ ಈಗ ಮತ್ತೆ ಅದನ್ನು ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ. ಇವೊತ್ತಿನ ಪರಿಸ್ಥಿತಿಯಲ್ಲಿ ನಾನು ಆಗ್ರಹ ಮಾಡುತ್ತೇನೆ, ಸರ್ಕಾರದ ವಿಚಾರದಲ್ಲಿ ಬಹಳ ಕಠೋರವಾಗಿ ಮಾತನಾಡಬೇಕು ಎಂದು ನಾನು ಅಪೇಕ್ಷೆ ಪಡುತ್ತಿಲ್ಲ, ಏಕೆಂದರೆ ನಿನ್ನೆ ಆತ್ಮಹತ್ಯೆ ಮಾಡಿಕೊಂಡು ಹುತಾತ್ಮನಾಗಿರುವ ರೈತನ ಅಂತ್ಯ ಸಂಸ್ಕಾರ ಇವೊತ್ತು ನಡೆಯುತ್ತಿದೆ. ಅಧಿವೇಶನ ನಡೆಯುತ್ತಿರುವ ಸಂದರ್ಭದಲ್ಲಿ ನಾವು ಸದನದೊಳಗೆ ನಿಂತುಕೊಂಡು ಬಾಯಿಗೆ ಬಂದಂತೆ ಮಾತನಾಡುವಂಥದ್ದು ನಮಗೆ ಯಾರಿಗೂ ಗೌರವ ತರುವುದಿಲ್ಲ ಎನ್ನುವಂತಹ ಪರಿಜ್ಞಾನದ ಹಿನ್ನೆಲೆಯಲ್ಲಿ ನಾನು ಇದನ್ನು ಹೇಳುತ್ತಿದ್ದೇನೆ. ಇವೊತ್ತು ಇಡೀ ರಾಜ್ಯದಲ್ಲಿರುವಂತಹ ಎಲ್ಲ ಕಬ್ಬು ಬೆಳೆಗಾರರೂ ಬಹಳ ಆತಂಕದಲ್ಲಿದ್ದಾರೆ, ಹೀಗಾಗಿ ಇದು ಮತ್ತೆ ಯಾವಾಗ ಬೇಕಾದರೂ ಸ್ಫೋಟ ಆಗಬಹುದು, ರಾಜ್ಯದಾದ್ಯಂತ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ಉಂಟಾಗಬಹುದು, ಇನ್ನಷ್ಟು ಆತ್ಮಹತ್ಯೆಗಳು ಅಥವಾ ಬೇರೆ ರೀತಿಯ ಘಟನೆಗಳು ನಡೆಯುವಂತಹ ಎಲ್ಲಾ ಲಕ್ಷಣಗಳು ಕೂಡ ಇವೊತ್ತು ನಮಗೆ ಗೋಚರವಾಗುತ್ತಿವೆ. ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಆದಾಯ ತರುವಂತಹ ರೈತರಿಗೆ ಅವರು ಕೊಡುವಂತಹ ತೆರಿಗೆಯ 1% ರಷ್ಟನ್ನು ಕೊಟ್ಟರೆ ಕೂಡ ಆ ರೈತನಿಗೆ ಸರ್ಕಾರದಿಂದ ₹ 1,000/ ಬೆಂಬಲ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಮಾಡಬೇಕಾದಂತಹ ಅವಶ್ಯಕತೆ ಇದೆ.

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸರ್ಕಾರದಲ್ಲಿ ನನ್ನ ಒತ್ತಾಯಪೂರ್ವಕ ವಿನಂತಿ ಇಷ್ಟೆ, ದಯವಿಟ್ಟು ನಿನ್ನೆಯ ದಿವಸ

ನಡೆದಿರುವಂತಹ ರೈತನ ಆತ್ಮಹತ್ಯೆ ವಿಚಾರದಲ್ಲಿ ಅವರು ಪಶ್ಚಾತ್ತಾಪ ಪಡಬೇಕು, ನಮ್ಮಿಂದಾಗಿ ತಪ್ಪಾಯಿತು, ನಾವು ರೈತರ ಸಮಸ್ಯೆಗೆ ಕ್ಷಿಪ್ರವಾಗಿ ಪರಿಹಾರ ಸೂತ್ರಗಳನ್ನು ತೆಗೆದುಕೊಳ್ಳುವುದಿಲ್ಲ ಎನ್ನುವಂತಹ ಉದ್ದೇಶದಿಂದ ಆ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದನ್ನು ಸರ್ಕಾರ ಅರಿತುಕೊಂಡು ಇದರಲ್ಲಿ ಯಾವುದೇ ego problems, ಯಾವುದೇ ಉದ್ಧಟತನಗಳನ್ನು ಪ್ರದರ್ಶಿಸುವ ಅವಶ್ಯಕತೆ ಇಲ್ಲ. ರಾಜ್ಯದಲ್ಲಿ ರೈತ ಉಳಿದರೆ ನಾವೆಲ್ಲ ಉಳಿಯುತ್ತೇವೆ ಎನ್ನುವಂಥದ್ದು ಇಡೀ ಜಗತ್ತಿಗೆ ಗೊತ್ತಿರುವಂತಹ ಸಂಗತಿ. ಇಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನಿಜವಾಗಿಯೂ ₹ 1,000/– ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೆ ಸರ್ಕಾರಕ್ಕೆ ಸ್ವಲ್ಪಮಟ್ಟಿಗಾದರೂ ಪಶ್ಚಾತ್ತಾಪವಾಗಿದೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ವಿಚಾರದಲ್ಲಿ ನಮ್ಮ ಆಗ್ರಹವಿದೆ, ಆ ರೈತನ ಆತ್ಮಹತ್ಯೆಗೆ ಸರ್ಕಾರದ ನಿರ್ಲಕ್ಷ್ಯತನದ ಧೋರಣೆ, ಅಲಕ್ಷ್ಯತೆಯ ಧೋರಣೆಯೇ ಕಾರಣವಾಗಿದೆ. ಇಂತಹ ಒಬ್ಬ ರೈತನ ಆತ್ಮಹತ್ಯೆಗೆ ಜವಾಬ್ದಾರಿ ಸ್ಥಾನದಲ್ಲಿರುವಂತಹ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ರಾಜೀನಾಮೆಯನ್ನು ಕೊಟ್ಟು ಕೆಳಗಿಳಿಯಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ.

ಮಾನ್ಯ ಸಭಾಪತಿಯವರೇ, ಮತ್ತೊಂದು ವಿಶೇಷವೆಂದರೆ ಬೆಳಗಾವಿ ಮಾನ್ಯ ಸಕ್ಕರೆ ಸಚಿವರ ಊರು. ನಿನ್ನೆಯ ದಿವಸ ಅವರು ನಡೆದುಕೊಂಡಂತಹ ರೀತಿನೀತಿಗಳು ಇಡೀ ಮಾಧ್ಯಮದಲ್ಲಿ ಯಾವ ರೀತಿ ಪ್ರಸಾರವಾಗಿದೆ ಎಂಬುದನ್ನು ನಾವು ಕಂಡಿದ್ದೇವೆ. ಖಂಡಿತವಾಗಿಯೂ ಅವರ ಆ ನಡವಳಿಕೆ ಯಾವ ರಾಜ್ಯದಲ್ಲಿರುವಂತಹ ರೈತನ ಮನಸ್ಸಿಗೂ ನೋವನ್ನು ಹೆಚ್ಚು ಮಾಡುವಂಥದ್ದಾಗಿದೆಯೇ ಹೊರತು ಅವರಿಗೆ ಒಂದಷ್ಟು ಶಾಂತಿ ಕೊಡುವಂತಹ ಕೆಲಸಕಾರ್ಯಗಳು ಆಗಿಲ್ಲ. ಆದರೂ ಕೂಡ ಇವೊತ್ತು ಕಲುಷಿತ ರಾಜಕಾರಣದಲ್ಲಿ ಒಂದಷ್ಟು ಶಿಷ್ಟಾಚಾರಗಳು, ಒಂದಷ್ಟು ಭಾವನಾತ್ಮಕ ವಿಚಾರಗಳನ್ನು ತೆಗೆದುಕೊಳ್ಳುವುದು, ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಗಳು ನೆಲೆಗೊಳ್ಳುವಂತಹ ಕೆಲಸಕಾರ್ಯಗಳನ್ನು ಮಾಡುವಂಥದ್ದು, ಆ ಜವಾಬ್ದಾರಿ ಸ್ಥಾನದಲ್ಲಿರುವವರ ಜವಾಬ್ದಾರಿಯಾಗಿರುತ್ತದೆ. ಆದಕಾರಣ

ಅದು ನಮ್ಮ ಅಪೇಕ್ಷೆಯಾಗಿದೆ ಮತ್ತು ನಾವು ಆ ಬಗ್ಗೆ ಸರ್ಕಾರವನ್ನು ಆಗ್ರಹಪಡಿಸುತ್ತೇವೆ. ಇಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಕ್ಕರೆ ಸಚಿವರು ನೈತಿಕ ಹೊಣೆಹೊತ್ತು ತಮ್ಮ ಸ್ಥಾನಗಳಿಗೆ ರಾಜಿನಾಮೆ ಕೊಡಬೇಕು. ಸರ್ಕಾರ ಪ್ರತಿ ಟನ್‌ಗೆ ₹ 1,000/- ದಂತೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು, ಅಲ್ಲಿಯವರೆಗೆ ನಮ್ಮ ಹೋರಾಟ ಮುಂದುವರೆಯುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಯವರು):-** ಸನ್ಮಾನ್ಯ ಸಭಾಪತಿಯವರೇ, ನಾನು ನಿನ್ನೆಯ ದಿವಸವೇ ಆತ್ಮಹತ್ಯೆ ಮಾಡಿಕೊಂಡು ಹುತಾತ್ಮನಾಗಿರುವಂತಹ ಶ್ರೀ ವಿಠ್ಠಲ ಭೀಮಪ್ಪ ಅರಭಾವಿ ಅವರ ಆತ್ಮಕ್ಕೆ ಶಾಂತಿ ಕೋರುವಂಥದ್ದು, ಅವರಿಗೆ ಗೌರವ ಸಲ್ಲಿಸುವಂಥದ್ದನ್ನು ಸರ್ಕಾರದ ಪರವಾಗಿ ಮಾಡಿದ್ದೇವೆ. ಇವೊತ್ತು ಮೃತ ವ್ಯಕ್ತಿಯ ಅಂತ್ಯಕ್ರಿಯೆ ಕೂಡ ನಡೆಯುತ್ತಿದೆ.

ವಿರೋಧ ಪಕ್ಷದ ನಾಯಕರಾಗಿರುವ ಮಾನ್ಯ ಸದಾನಂದಗೌಡರು ಈ ಹಿಂದೆ ಈ ರಾಜ್ಯದ ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ನಡೆಸಿದ್ದಾರೆ. ಕಳೆದ ವರ್ಷ ಸಕ್ಕರೆ ಬೆಲೆ ಕ್ವಿಂಟಾಲ್‌ಗೆ ₹ 3200/- ರಿಂದ ₹ 3,400/- ರವರೆಗೆ ಇತ್ತು. ಆ ಸಂದರ್ಭದಲ್ಲಿ ಅಧಿಕಾರದಲ್ಲಿದ್ದಂತಹ ಬಿ.ಜೆ.ಪಿ. ಪಕ್ಷದ ಸರ್ಕಾರದವರು ರೈತರ ಪ್ರತಿ ಟನ್ ಕಬ್ಬಿಗೆ ಟನ್‌ಗೆ ₹ 2,400/- ರಂತೆ ಬೆಲೆಯನ್ನು ನಿಗದಿಪಡಿಸಿದ್ದರು. ಇವೊತ್ತು ಅನೇಕ ಕಾರಣಗಳಿಂದಾಗಿ ಸಕ್ಕರೆ ಬೆಲೆ ಕುಸಿದಿದ್ದು, ಕ್ವಿಂಟಾಲ್‌ಗೆ ₹ 2,600/- ರಿಂದ ₹ 2,650/- ₹ 2,700/- ರವರೆಗಿದೆ. ಹೀಗಾಗಿ ಕ್ವಿಂಟಾಲ್‌ಗೆ ಸುಮಾರು ₹ 600/- ರಿಂದ ₹ 700/- ರವರೆಗೆ ಸಕ್ಕರೆ ಬೆಲೆ ಕಡಿಮೆಯಾಗಿದೆ. ಇವೊತ್ತು ರೈತರ ಬಗ್ಗೆ ಬಹಳ ಮಾತನಾಡುತ್ತಿರುವ ಇವರು ರೈತರ ಆತ್ಮಹತ್ಯೆಗೆ ನಾವು ಕಾರಣ ಎಂದು ಹೇಳುತ್ತಿದ್ದಾರಲ್ಲಾ, ಸಕ್ಕರೆಯ ಬೆಲೆ ₹ 3200/- ರಿಂದ ₹ 3,400/- ಇದ್ದಾಗ ಇವರು ಕಬ್ಬಿನ ಬೆಲೆಯನ್ನು ₹ 2,400/- ರಷ್ಟು ಮಾತ್ರ ಏಕೆ ನಿಗದಿಪಡಿಸಿದರು? ₹ 3000/- ಕ್ಕಿಂತ ಹೆಚ್ಚಿನ ಬೆಲೆಯನ್ನು ಅವರು

ಕೊಡಿಸಬಹುದಾಗಿತ್ತಲ್ಲವೆ? ಏಕೆಂದರೆ ಇವರು ರೈತರ ಬಗ್ಗೆ ಬಹಳ ಕಾಳಜಿ ಇದ್ದವರು. ಕಬ್ಬು ಬೆಳೆಗಾರರು ಕಳೆದ ಬಾರಿ ಕೂಡ ಬೆಳಗಾವಿಯಲ್ಲಿ ಗಲಾಟೆ ಮಾಡಿದಂತಹ ಸಂದರ್ಭದಲ್ಲಿ ಏಕೆ ಹಿಂದಿನ ಸರ್ಕಾರದವರಿಗೆ ರೈತರ ಬಗ್ಗೆ ಕಾಳಜಿ ಇರಲಿಲ್ಲ? ಇವತ್ತು ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ, ಆಗಬಾರದ ದುರ್ಘಟನೆ ಆಗಿದೆ. ನಾವು ಕಬ್ಬಿನ ಬೆಲೆ ನಿಗದಿ ಮಾಡುವುದಕ್ಕೆ ಎಲ್ಲಿಯೂ ಕೂಡ ವಿಳಂಬ ಮಾಡುವುದಾಗಲಿ, ನಿರ್ಲಕ್ಷ್ಯ ಮಾಡುವುದಾಗಲಿ, ಅಲಕ್ಷ್ಯ ಮಾಡುವುದಾಗಲಿ ಮಾಡಲಿಲ್ಲ. ಸಾಮಾನ್ಯವಾಗಿ ಕಬ್ಬು ಅರೆಯುವುದು ನವೆಂಬರ್ ತಿಂಗಳಿನಿಂದ, ಏಪ್ರಿಲ್ ತಿಂಗಳಿನವರೆಗೆ. ದಿನಾಂಕ: 12 ನೇ ಮಾರ್ಚ್ 2013ರಂದು 'ಕರ್ನಾಟಕ ಕಬ್ಬು ಖರೀದಿ ಮತ್ತು ಸರಬರಾಜು ಕಾಯಿದೆ 2013' ಎನ್ನುವ ಕಾನೂನನ್ನು ರಚಿಸಲಾಯಿತು. ಸರ್ಕಾರ ಆ ಕಾಯ್ದೆಯ ಸೆಕ್ಷನ್ (4)ರ ಅಡಿಯಲ್ಲಿ 'ಕಬ್ಬು ನಿಯಂತ್ರಣ ಮಂಡಳಿಯನ್ನು' ರಚನೆ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ನಮ್ಮ ಸರ್ಕಾರ ಬಂದು 6 ತಿಂಗಳು ಆಯಿತು. ಈ ಆರು ತಿಂಗಳಿನ ಒಳಗೆ Sugar Control Board ರಚನೆ ಮಾಡಿ ಆದೇಶ ಹೊರಡಿಸಿದೆವು. ನವೆಂಬರ್ ತಿಂಗಳಿನಿಂದಲೇ ಕಬ್ಬು ಅರೆಯುವುದು ಪ್ರಾರಂಭವಾಗುತ್ತದೆ ಎಂದು ಸೆಪ್ಟೆಂಬರ್ ತಿಂಗಳಿನಲ್ಲಿಯೇ Sugar Control Board ಸಭೆ ಕರೆದೆವು. ಪುನಃ ಅಕ್ಟೋಬರ್ ತಿಂಗಳಿನಲ್ಲಿ ಮತ್ತು ನವೆಂಬರ್ ತಿಂಗಳಿನಲ್ಲಿ ಸಭೆ ಕರೆದೆವು. ಒಟ್ಟು ಮೂರು ಸಭೆಗಳನ್ನು ಮಾಡಿದ್ದೇವೆ. ಮೊದಲ ಎರಡು ಸಭೆಗಳಲ್ಲಿ ಇತ್ಯರ್ಥವಾಗಲಿಲ್ಲ. ಕಬ್ಬು ನಿಯಂತ್ರಣ ಮಂಡಳಿಯಲ್ಲಿ ಕಾರ್ಖಾನೆಯ ಪ್ರತಿನಿಧಿಗಳಿರುತ್ತಾರೆ, ರೈತರ ಪ್ರತಿನಿಧಿಗಳಿರುತ್ತಾರೆ, ಸರ್ಕಾರದ ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ, ಕೃಷಿ ಸಚಿವರು ಇರುತ್ತಾರೆ, ಅಧಿಕಾರಿಗಳು ಇರುತ್ತಾರೆ. ಇವರು ಚರ್ಚೆ ಮಾಡಿ ಸೆಕ್ಷನ್ 4(ಎಫ್) ಪ್ರಕಾರ ಇವತ್ತಿನ ಸಕ್ಕರೆ ಬೆಲೆ ಗಣನೆಗೆ ತೆಗೆದುಕೊಳ್ಳಬೇಕು, ಅದೇ ರೀತಿ ಕಾಕಂಬಿಯನ್ನು, ಕಬ್ಬಿನ ಸಿಪ್ಪೆಯನ್ನು, press mud ನ್ನು ಗಣನೆಗೆ ತೆಗೆದುಕೊಳ್ಳಬೇಕು. ಇದರ ಆಧಾರದ ಮೇಲೆ ಬೆಲೆಯನ್ನು ನಿಗದಿ ಪಡಿಸಬೇಕು ಎಂದು ಹೇಳಿದ್ದಾರೆ. ಅದೇ ರೀತಿ ಕೇಂದ್ರಸರ್ಕಾರ ಕಬ್ಬಿನ ಬೆಲೆಯನ್ನು ನಿಗದಿಪಡಿಸುವುದಕ್ಕೆ ಶ್ರೀ 'ರಂಗರಾಜನ್' ಅವರ ಅಧ್ಯಕ್ಷತೆಯಲ್ಲಿ ಒಂದು

ಸಮಿತಿಯನ್ನು ರಚನೆ ಮಾಡಿತ್ತು. ರಂಗರಾಜನ್‌ರವರು ಈ ದೇಶದ ಪ್ರಧಾನ ಮಂತ್ರಿಗಳಿಗೆ ಸಲಹೆಗಾರರು ಸಹ ಆಗಿದ್ದಾರೆ. ಅವರು ಈ ವರದಿಯ ಆಧಾರದ ಮೇಲೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅವರ ವರದಿಯ ಪ್ರಕಾರ revenue sharing formula ಕೊಟ್ಟಿದ್ದಾರೆ. Revenue sharing formula ಪ್ರಕಾರ ಈಗಾಗಲೇ ಹೇಳಿದಂತೆ ಸಕ್ಕರೆ ಎಷ್ಟು ಬೆಲೆಗೆ ಮಾರಾಟ ಆಗುತ್ತದೆ ಅದರ ಬೆಲೆ ಮತ್ತು end products ಏನಿವೆ, ಮತ್ತು primary byproducts ಬೆಲೆ ಎಷ್ಟಾಗುತ್ತದೆ? ಇವೆಲ್ಲವೂ ಸೇರಿಸಿ, revenue sharing ಅಂದರೆ ಶೇಕಡ 70ರಷ್ಟು ರೈತರಿಗೆ, ಶೇಕಡಾ 30ರಷ್ಟು ಕಾರ್ಖಾನೆಯವರಿಗೆ ಎಂದು ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಈಗೇನು ವಿರೋಧ ಪಕ್ಷದವರು ಹೇಳುತ್ತಿದ್ದಾರೆ, ಸರ್ಕಾರಕ್ಕೆ ಮೂರು ಸಾವಿರ ಕೋಟಿ ರೂ ಆದಾಯ ಬರುತ್ತಿದೆ. Distillery ಮಾಡುತ್ತಾರೆ, rectified spirit ಬರುತ್ತದೆ ಎಂದು ಏನು ಹೇಳುತ್ತಿದ್ದಾರೆ, ಅದು ನಿಮ್ಮ ಕಾಲದಲ್ಲಿಯೂ ಇತ್ತು. Rectified spirit ಕೇವಲ ನಮ್ಮ ಕಾಲದಲ್ಲಿ ಉದ್ಭವ ಆಗಿದ್ದಲ್ಲ. ನಿಮ್ಮಕಾಲದಲ್ಲಿಯೂ distillery ಇತ್ತು, ನಿಮ್ಮ ಕಾಲದಲ್ಲಿಯೂ rectified spirit ತಯಾರಾಗುತ್ತಿತ್ತು, ನಿಮ್ಮ ಕಾಲದಲ್ಲಿಯೂ ಸಹ co-generation ಇತ್ತು, ಈಗಲೂ co-generation ಇದೆ. ಇವೆಲ್ಲವೂ ನಿಮ್ಮ ಕಾಲದಲ್ಲಿಯೂ ಇತ್ತು. ಇದನ್ನು ನಾವು ರಾಜಕೀಯ ಲಾಭಕ್ಕೋಸ್ಕರ ನೋಡುತ್ತಿಲ್ಲ. ವಸ್ತುಸ್ಥಿತಿ ಆಧಾರದ ಮೇಲೆ ಮಾತನಾಡಬೇಕಾಗುತ್ತದೆ. ನಾವು ಬೇಕಾದರೆ ಬೇರೆ ಕಡೆ ರಾಜಕಾರಣ ಮಾಡೋಣ. ವಸ್ತುಸ್ಥಿತಿ ಏನು? ವಸ್ತುಸ್ಥಿತಿಯ ಆಧಾರದ ಮೇಲೆ ನಾವು ಯಾವತ್ತು ಸಹ ವಾಸ್ತವಾಂಶಗಳನ್ನು ಮುಚ್ಚಿಟ್ಟು, ಏನೋ ರಾಜಕೀಯವಾಗಿ ನಮಗೆ ಲಾಭ ಆಗುತ್ತದೆ ಎನ್ನುವಂತಹ ಮಾತುಗಳನ್ನಾಡುವಂಥದ್ದು...

**ಶ್ರೀ ಡಿ.ವಿ. ಸದಾನಂದಗೌಡ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈ ಮಾತನ್ನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಮತ್ತು ಈ ಮಾತುಗಳು ನಿನ್ನೆ ದಿವಸದಿಂದ...

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನೀವು ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡಿದ್ದೇನೆ. ಮಾನ್ಯ ಸಭಾಪತಿಯವರೆ, ಅವರು ಮಾತನಾಡುವಾಗ ನಾನು ಬಾಯಿ ತೆಗೆಯಲಿಲ್ಲ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ದಾರಿ ತಪ್ಪಿಸುವಂತಹ ಕೆಲಸ ಮಾಡಬಾರದು. ಈ ಮಾತನ್ನು ಇವತ್ತು ಹೇಳುತ್ತಿಲ್ಲ, ಕಳೆದ 72 ಗಂಟೆಗಳಿಂದ ಇದೇ ವಿಷಯದ ಬಗ್ಗೆ ಚರ್ಚೆ ನಡೆಯುತ್ತಿದೆ.

(ಗೊಂದಲ)

Sri SIDDARAMAIH: No, this is too much. This is too much.

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ಈ ರೀತಿ ಅಡ್ಡಿಪಡಿಸಿದರೆ ಹೇಗೆ?

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಅವರು ಮಾತನಾಡುವಾಗ ನಾವು ತುಟಿಕ್–ಪಿಟಿಕ್ ಎನ್ನಲಿಲ್ಲ. ಶಾಂತ ರೀತಿಯಿಂದ ಕೇಳಿದೆವು. ಆದರೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಇವರು ಒಬ್ಬರಿಗೆ ಮಾತ್ರ ಹೇಳುವುದಕ್ಕೆ ಅವಕಾಶವಿರುವುದೇ? ನಮಗೆ ಮಾತ್ರ ಅವಕಾಶವಿಲ್ಲವೆ?

**ಶ್ರೀ ಎಸ್.ಆರ್. ಪಾಟೀಲ್:–** ಇದು ಸಂಸದೀಯ ಪದ್ಧತಿಯೇ? ತಾವೆ ಹೇಳಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಇದು ಸಂಸದೀಯ ಪದ್ಧತಿಯೇ?

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಯವರೇ, ನಮಗೆ ಗೊತ್ತಿಲ್ಲವೆ? ಸರ್ಕಾರದ ಮೇಲೆ ದೋಷಾರೋಪಣೆ...

(ಗೊಂದಲ)

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ಮಾನ್ಯ ಮುಖ್ಯಮಂತ್ರಿಗಳು ನಿಂತಿದ್ದಾರೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ರಾಜಿನಾಮೆ ಕೊಡಬೇಕು ಎಂದರೆ...

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಈಗಾಗಲೆ ನಿಮ್ಮದು ಆರು ತಿಂಗಳು ಕಳೆಯಿತು ಸ್ವಾಮಿ. ಇನ್ನೂ ಕೂಡ ಹಿಂದಿನ ಸರ್ಕಾರ ಏನು ಮಾಡಿದೆ ಎಂದು ಪ್ರಶ್ನೆ ಮಾಡುವುದಲ್ಲ, ಈಗಿನ ಸರ್ಕಾರ ಎನು ಮಾಡಿದೆ ಎಂದು ಹೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಕಾರಣ ಹೇಳಬೇಕಾಗುತ್ತದೆ, ಹೌದು ಸತ್ಯ ಹೇಳಬೇಕಾಗುತ್ತದೆ. ಅದರ ಹಿನ್ನೆಲೆಯನ್ನು ಹೇಳಬೇಕಾಗುತ್ತದೆ.

(ಗೊಂದಲ)

**ಸಭಾಪತಿಯವರು:–** ನಾನು ಹೇಳುವುದನ್ನು ಸ್ವಲ್ಪ ಕೇಳಿ.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಮುಖ್ಯಮಂತ್ರಿಗಳು ಹಲವಾರು ಸಂಗತಿಗಳನ್ನು ದಾಖಲೆಗೆ ಹೋಗಬೇಕೆಂದು ಹೇಳಿರುವಂತಹ ಮಾತುಗಳನ್ನು ನಾವು ಒಪ್ಪಿಕೊಳ್ಳುವುದಿಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಅಂದರೆ ದಾಖಲೆಗೆ ಹೋಗಬಾರದು ಎಂದಾಯಿತಲ್ಲ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಬೆಂಬಲ ಬೆಲೆ ಕೊಡುವುದಕ್ಕೆ ಆಗುತ್ತದೆಯೇ ಇಲ್ಲವೆ ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ವಿಷಯ ದಾಖಲೆಗೆ ಹೋಗಬಾರದೆ? ಇಲ್ಲದೆ ಇರುವಂಥದ್ದನ್ನು ಏನು ಹೇಳಲಿಲ್ಲವಲ್ಲ.

**ಸಭಾಪತಿಯವರು:–** ಒಂದು ನಿಮಿಷ ಕುಳಿತುಕೊಳ್ಳಿ. ನಾನು ಹೇಳುವುದನ್ನು ಸ್ವಲ್ಪ ಕೇಳಿ. ಈಗ ಮಾನ್ಯ ಸದಸ್ಯರು ಸದನದ ಬಾವಿಯೊಳಗೆ ಕುಳಿತು ವಿರೋಧ ಪಕ್ಷದ ನಾಯಕರು ಅವರ ಸ್ಥಾನದಲ್ಲಿ ನಿಂತು ಚರ್ಚೆ ಮಾಡುವುದು, ಅಥವಾ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುವಂಥದ್ದು ಯಾವುದೂ ಸರಿಯಲ್ಲ. ಆದಕಾರಣ ಈ ರೀತಿ ಮಾಡೋಣ, ಮೊದಲು ಮಾನ್ಯ ಸದಸ್ಯರುಗಳು ಅವರವರ ಸ್ಥಾನಗಳಿಗೆ ತೆರಳಿ, ಮೊದಲು ಪ್ರಶ್ನೋತ್ತರ ಅವಧಿಯನ್ನು ಮುಗಿಸೋಣ, ನಂತರ ಇದು ಬಹಳ ಗಂಭೀರವಾದಂತಹ ವಿಷಯ, ಅಲ್ಲದೆ ಇವತ್ತಿನ ದಿವಸ ಇಡೀ ರಾಜ್ಯ ನಮ್ಮ ಸುವರ್ಣಸೌಧದಲ್ಲಿ ಆಗುತ್ತಿರುವಂತಹ ವಿದ್ಯಮಾನಗಳನ್ನು ಗಮನಿಸುತ್ತಿದೆ. ಆದುದರಿಂದ ಅದರ ಬಗ್ಗೆ ಚರ್ಚೆ ಮಾಡೋಣ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಈಗ ನಾನು ಮಾತನಾಡಿ ಮುಗಿಸುತ್ತೇನೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಮಧ್ಯೆ ನಿಂತು ಮಾತನಾಡುತ್ತೀರಲ್ಲ ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೇ, Parlimentary procedure ಪ್ರಕಾರ ತಾವು ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಈಗ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಿದ್ದಾರೆ, ಅವರು ಮಾತನಾಡುವಾಗ ನಾವ್ಯಾರು intervene ಮಾಡಿಲ್ಲ, ಆದರೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಇವರು ಏಕೆ intervene ಮಾಡಬೇಕು? ತಾವು ಇದನ್ನು control ಮಾಡಬೇಕು.

(ಗೊಂದಲ)

**ಸಭಾಪತಿಯವರು:–** ಈಗ ಮಾನ್ಯ ಮುಖ್ಯಮಂತ್ರಿಯವರು ಮಾತನಾಡಲಿ, ಅವರು ಮಾತನಾಡಿದ ಮೇಲೆ ಧರಣಿ ನಿರತ ಸದಸ್ಯರು ಅವರವರ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾವು ಮಾತನಾಡಿದ ಮೇಲೆ ಅವರು ಏನು ಹೇಳಬೇಕೋ ಅದನ್ನು ಹೇಳಲಿ.

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಈಗಾಗಲೇ ಆರು ತಿಂಗಳು ಕಳೆಯಿತು, ಪ್ರತಿಯೊಂದಕ್ಕೂ ನೀವು ಏನು ಮಾಡಿದ್ದೀರಿ, ನೀವು ಏನು ಮಾಡಿದ್ದೀರಿ ಎಂದು ಕೇಳುವುದು ಸರಿಯಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳಿ, ಮಾನ್ಯ ಮುಖ್ಯಮಂತ್ರಿಗಳು ಸತ್ಯ ಸಂಗತಿ ಏನಿದೆ ಎಂದು ಬಿಚ್ಚಿಡುತ್ತಾರೆ, ಸ್ವಲ್ಪದರಲ್ಲಿಯೇ ಮುಗಿಯುತ್ತದೆ. ಆಮೇಲೆ ತಾವು ಏನು ಆದೇಶ ಮಾಡುತ್ತಿರೋ ಅದರಂತೆ ನಡೆದುಕೊಳ್ಳುತ್ತೇವೆ. ಮಾನ್ಯ ಪ್ರತಿಪಕ್ಷದ ನಾಯಕರು ಹೇಳಿದಂತೆ ನಾವೆಲ್ಲರೂ ಕೇಳಿದ್ದೇವೆ, ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ ಈ ರೀತಿ ಏಕೆ ಮಾಡುತ್ತಾರೆ? ಸತ್ಯ ಹೇಳುವುದು ಬೇಡವೆ? ಸತ್ಯ ಬಯಲಿಗೆ ಬರಬಾರದೆ? ಮಾನ್ಯ

ಸಭಾಪತಿಯವರೇ ಪೀಠದಲ್ಲಿ ಕುಳಿತಿರುವಂತಹ ತಾವೇ ಹೇಳಿ ಇದು ಸಂಸದೀಯ ವ್ಯವಸ್ಥೆಯಲ್ಲಿ ಸರಿ ಇದೆಯೇ?

(ಗೊಂದಲ)

Sri SIDDARAMAIH: See, they can't hijack the House. ಅವರು ಮಾತನಾಡುವುದನ್ನು ನಾವು ಕೇಳಿದ್ದೇವೆ, ನಾವು ಮಾತನಾಡುವುದನ್ನು ಅವರು ಕೇಳಬೇಕು.

(ಗೊಂದಲ)

Sri D.V. SADANANDA GOWDA: We are not hijacking the House. But don't make use of this... (INTERRUPTIONS)... We are demanding justice for the farmers.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ನಾವು ಮಾತನಾಡುವುದನ್ನು ಅವರು ಕೇಳಬೇಕು. ರಾಜ್ಯದ ಜನತೆಗೆ ಸತ್ಯ ಗೊತ್ತಾಗಬೇಕು.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದನ್ನು ಎಲ್ಲಾ ಮಾನ್ಯ ಸದಸ್ಯರು ಕೇಳಬೇಕು, ಅದೇ ರೀತಿ ಮಾನ್ಯ ಸದಸ್ಯರುಗಳು ಮಾತನಾಡುವುದನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿದ ಮೇಲೆ ಅವರಿಗೆ ಅವಕಾಶ ಕೊಡಿ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಇದು ಯಾವ ರೀತಿಯ ವ್ಯವಸ್ಥೆ? You should not allow the House to be hijacked by the Opposition

Leader. ಮಾನ್ಯ ಸಭಾಪತಿಯವರೇ, ಪ್ರತಿಪಕ್ಷದವರಿಂದ ಸದನ hijack ಆಗುವುದಕ್ಕೆ ಬಿಡಬಾರದು. ತಾವು ಆ ಪೀಠದಿಂದ ಆದೇಶ ಮಾಡಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಇದು ಒಂದು ಕೆಟ್ಟ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ.

(ಗೊಂದಲ)

(ಈ ಹಂತದಲ್ಲಿ ಸದನದ ಬಾವಿಯಲ್ಲಿ ಧರಣಿಯಲ್ಲಿ ಪಾಲ್ಗೊಂಡಿದ್ದಂತಹ ಬಿಜೆಪಿ ಸದಸ್ಯರು 'ಸರ್ಕಾರಕ್ಕೆ ದಿಕ್ಕಾರ' ಎಂದು ಕೂಗುತ್ತಿದ್ದರು)

**ಸಭಾಪತಿಯವರು:–** ದಯಮಾಡಿ ಸದನದಲ್ಲಿ ಯಾರು ಘೋಷಣೆಗಳನ್ನು ಕೂಗಬಾರದು.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಇದು ಯಾವ ಪದ್ದತಿ.

**ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಡಿ.ವಿ. ಸದಾನಂದಗೌಡ:–** ಹಿಂದಿನ ಸರ್ಕಾರಗಳ ಮೇಲೆ ದೋಷಾರೋಪಣೆ ಮಾಡಿಕೊಂಡು ಕಾಲಹರಣ ಮಾಡುವುದು ಸರಿಯಾದುದಲ್ಲ.

**ಶ್ರಿ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ನನಗೆ ಮಾತನಾಡಲು ಸ್ವಲ್ಪ ಅವಕಾಶ ಕೊಡಿ.

**ಸಭಾಪತಿಯವರು:–** ನಾನು ಎಲ್ಲರಿಗೂ ಮಾತನಾಡಲು ಅವಕಾಶ ನೀಡುತ್ತೇನೆ. ನಿನ್ನೆ ನಡೆದ ಘಟನೆಯ ಬಗ್ಗೆ ಇಂದು ಚರ್ಚೆ ನಡೆಸಬೇಕಾಗಿದೆ. ಇಡೀ ರಾಜ್ಯ ಸುವರ್ಣಸೌಧದ ಕಡೆಗೆ ನೋಡುತ್ತಿದೆ. ಇಂತಹ ಸಂದರ್ಭದಲ್ಲಿ ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಎಲ್ಲರಿಗೂ ಅವಕಾಶವಿದೆ. ನಾಣಯ್ಯನವರು, ವಿರೋಧ ಪಕ್ಷದ ನಾಯಕರು ಮತ್ತು ಹೊರಟ್ಟಿಯವರು

ಸಹ ಮಾತನಾಡಲು ಅವಕಾಶ ಕೋರಿದ್ದಾರೆ. ಈಗ ಮುಖ್ಯಮಂತ್ರಿಯವರು ಮಾತನಾಡಿದ ಮೇಲೆ ಎಲ್ಲರಿಗೂ ಅವಕಾಶ ನೀಡಲಾಗುವುದು.

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡಬಾರದೆನ್ನುವುದು ನಮ್ಮ ಉದ್ದೇಶವಲ್ಲ. ಆದರೆ ಅವರು ನೀವೇನು ಮಾಡಿದ್ದೀರಿ ಎಂದು ಹಿಂದಿನ ಸರ್ಕಾರಗಳನ್ನು ಕೇಳುವುದು ಸರಿಯಲ್ಲ.

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಸರ್ಕಾರ ಮಾತನಾಡುವುದನ್ನು ಮೊದಲು ಕೇಳಲಿ. ನಂತರ ಅವರು ಮಾತನಾಡಲಿ.

**ಶ್ರೀ ಡಿ.ವಿ. ಸದಾನಂದಗೌಡ:–** ಹಿಂದಿನ ಸರ್ಕಾರಗಳ ಮೇಲೆ ದೋಷಾರೋಪಣೆ ಮಾಡುವುದು ಬೇಡ. ಸುಮ್ಮನೆ ಕಾಲಹರಣ ಮಾಡುವುದು ಬೇಡ. ಈಗ ಸರ್ಕಾರ ಪರಿಹಾರ ಕೊಡುವುದೇ, ಅದನ್ನು ಘೋಷಣೆ ಮಾಡುವುದೇ ಎನ್ನುವುದನ್ನು ತಿಳಿಸಬೇಕು. ಅದನ್ನು ಬಿಟ್ಟು ಅವರು ಉದ್ದುದ್ದದ ಭಾಷಣ ಮಾಡುವುದರ ಅಗತ್ಯವಿಲ್ಲ. ಈ ಸದನವನ್ನು ತಪ್ಪು ದಾರಿಗೆ ತೆಗೆದುಕೊಂಡು ಹೋಗುವುದು ಬೇಕಾಗಿಲ್ಲ. ನಾವು ಮಾಡಲಿಲ್ಲವೆಂದೇ ಜನರು ನಿಮಗೆ ಅಧಿಕಾರವನ್ನು ಕೊಟ್ಟಿರುವುದು.

**ಸಭಾಪತಿಯವರು:–** ಈಗ ಮುಖ್ಯಮಂತ್ರಿಯವರು ಮಾತನಾಡಲು ಒಂದು ವಾತಾವರಣ ಸೃಷ್ಟಿಸೋಣ. ಅವರು ಮಾತನಾಡಿದ ಮೇಲೆ ಮುಂದೆ ಚರ್ಚೆಯನ್ನು ಮಾಡೋಣ.

(ಗೊಂದಲ)

**(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಸದಸ್ಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು)**

**ಶ್ರೀ ಸಿದ್ದರಾಮಯ್ಯ:–** ಜನರು ನಿಮಗೆ ಕುರ್ಚಿ ಬಿಡಿಸಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಈ ರಾಜ್ಯದ ಜನರು ನಿಮಗೆ ಒಳ್ಳೆಯ ಪಾಠವನ್ನು ಕಲಿಸಿದ್ದಾರೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೆ, ನಾವು ರೈತರ ಹಿತವನ್ನು ಕಾಪಾಡುವುದರಲ್ಲಿ ಎಲ್ಲಿಯೂ ತಪ್ಪು ಮಾಡಿಲ್ಲ, ಎಲ್ಲಿಯೂ ಎಡವಿರುವುದಿಲ್ಲ. ನಾವು ಮೂರು ಬಾರಿ ಸಭೆಗಳನ್ನು ನಡೆಸಿ, ರೈತರು ಮತ್ತು ಸಕ್ಕರೆ ಕಾರ್ಖಾನೆಗಳ ಪ್ರತಿನಿಧಿಗಳ ಜೊತೆಯಲ್ಲಿ ಚರ್ಚಿಸಿ, ಇದೇ ವರ್ಷ ನವೆಂಬರ್ ೧೦ ರಂದು ರೈತರಿಗೆ ಒಂದು ಟನ್ ಕಬ್ಬಿಗೆ ೨೫೦೦ ರೂಪಾಯಿಗಳನ್ನು ಕೊಡಬೇಕೆನ್ನುವ ತೀರ್ಮಾನ ಮಾಡಿದ್ದೇವೆ. ನಾವು ಇದನ್ನು ಘೋಷಣೆ ಮಾಡುವಾಗ ಸಕ್ಕರೆ ಬೆಲೆ ಕಡಿಮೆ ಆಗಿದೆ ಎನ್ನುವ ಕಾರಣಕ್ಕಾಗಿ ಸರ್ಕಾರಕ್ಕೆ ಬರುತ್ತಿದ್ದ ತೆರಿಗೆಗಳನ್ನು ರದ್ದು ಮಾಡಿದ್ದೇವೆ. ಸುಮಾರು ೩೦೦ ಕೋಟಿ ರೂಪಾಯಿಗಳ ತೆರಿಗೆಯನ್ನು ರದ್ದು ಮಾಡಿದ್ದೇವೆ. ಆ ನೂರು ರೂಪಾಯಿಗಳನ್ನು ರೈತನಿಗೆ ನೀಡಬೇಕೆಂದು ಸಕ್ಕರೆ ಕಾರ್ಖಾನೆಗಳವರಿಗೆ ಹೇಳಿದ್ದೇವೆ. ೨೪೦೦ ರೂಪಾಯಿಗಳನ್ನು ಸಕ್ಕರೆ ಕಾರ್ಖಾನೆಯವರು ನೀಡಬೇಕು, ಮತ್ತು ಸರ್ಕಾರ ತೆರಿಗೆ ರದ್ದು ಮಾಡಿರುವ ೧೦೦ ರೂಪಾಯಿಗಳನ್ನು ರೈತನಿಗೆ ನೀಡಬೇಕು. ಒಟ್ಟು ೨೫೦೦ ರೂಪಾಯಿಗಳನ್ನು ex-gate ನಲ್ಲಿ ೧೨ ಸಕ್ಕರೆ ಕಾರ್ಖಾನೆಗಳಿಗೆ ನೀಡಬೇಕು.

(ಗೊಂದಲ)

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೇ, ಇವರಿಗೆ ನಾಚಿಕೆ ಆಗುವುದಿಲ್ಲವೇ? ಮಾನಮರ್ಯಾದೆ ಇದೆಯೇ, ಮಾನ ಮರ್ಯಾದೆ ಇರುವವರು ನಡೆದುಕೊಳ್ಳುವ ರೀತಿಯಲ್ಲ ಇದು, ಪ್ರಜಾಪ್ರಭುತ್ವದಲ್ಲಿ ಇವರಿಗೆ ನಂಬಿಕೆ ಇದೆಯೇ? ಅವರು ಮಾತನಾಡಿದ್ದನ್ನು ನಾವು ಕೇಳಿದ್ದೇವೆ, ನಮಗೆ ಮಾತನಾಡಲು ಬಿಡದಿದ್ದರೆ ಏನಿದು?

**ಸಭಾಪತಿಯವರು:–** ಸದನವನ್ನು ೧೦ ನಿಮಿಷಗಳ ಕಾಲ ಮುಂದೂಡಲಾಗಿದೆ.

**(ಸದನವನ್ನು ಮಧ್ಯಾಹ್ನ 12 ಗಂಟೆಯಲ್ಲಿ ಹತ್ತು ನಿಮಿಷಗಳ ಅವಧಿಗೆ ಮುಂದೂಡಲಾಯಿತು.)**

**(ಸದನವು ಮಧ್ಯಾಹ್ನ 2 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಗಳಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಪೀಠವನ್ನು ಅಲಂಕರಿಸಿದರು.)**

(ಗೊಂದಲ)

**ಶ್ರೀ ಡಿ.ವಿ. ಸದಾನಂದಗೌಡ:–** ಮಾನ್ಯ ಸಭಾಪತಿಗಳೇ, ಇಂದು ಸದನದ ಕಲಾಪಕ್ಕೆ ಅಲ್ಪಸ್ವಲ್ಪ ತೊಂದರೆ ಆಗುತ್ತಿರುವುದನ್ನು ನಾವು ನೋಡಿದ್ದೇವೆ. ರೈತರ ಪರವಾಗಿ ಕೆಲವೊಂದು ಬೇಡಿಕೆಗಳನ್ನು ಸರ್ಕಾರದ ಮುಂದಿಡುವ ಕೆಲಸಕಾರ್ಯಗಳನ್ನು ನಾವು ಮಾಡುತ್ತಿದ್ದೇವೆ. ನಮಗೆ ನಿಶ್ಚಯವಾಗಿ ಸದಸನದ ಕಲಾಪ ಚೆನ್ನಾಗಿ ನಡೆಯಬೇಕು ಎಂದಿದೆ. ಉತ್ತರ ಕರ್ನಾಟಕದ ಹಲವಾರು ಸಮಸ್ಯೆಗಳು ಇನ್ನೂ ಬಾಕಿ ಉಳಿದಿವೆ. ಇಂತಹ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಆಗಲೇಬೇಕೆನ್ನುವುದು ನಮ್ಮ ಅಭಿಪ್ರಾಯ ಆಗಿದೆ. ಆದರೆ ಇವತ್ತು ಇಂತಹ ದೊಡ್ಡ ವಿಚಾರ ಚರ್ಚೆಗೆ ಬಂದಾಗ, ಆಡಳಿತ ಪಕ್ಷದ ಕಡೆಯಿಂದ ಸಹ ಇಂತಹ ಬೇಡಿಕೆಗಳು ಸದನದ ಮುಂದೆ ಬಂದಾಗ ಸರ್ಕಾರದ ಕಡೆಯಿಂದ ಒಂದು ಸಕಾರಾತ್ಮಕವಾದ ಸ್ಪಂದನ ಬಾರದಿರುವುದು ನಮ್ಮ ಮನಸ್ಸಿಗೆ ನೋವಾಗಿದೆ. ಪ್ರಾಯಶಃ ಇವತ್ತು ಸದನದ ಕಲಾಪ ನಡೆಯದೇ ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಆಗದಿದ್ದರೆ ಅದಕ್ಕೆ ಪೂರ್ಣ ಕಾರಣ ನಮ್ಮ ಆಡಳಿತ ಪಕ್ಷವೇ ಆಗುತ್ತದೆ. ಅವರ ಹಠದಿಂದ ಏನಾದರೂ ಮಾಡಿ ಸದನವನ್ನು ಮುಂದೂಡಬೇಕೆನ್ನುವುದು, ಇದರಿಂದ ಯಾವುದೇ ವಿಚಾರ ಚರ್ಚೆಗೆ ಬರುವುದಿಲ್ಲ ಎನ್ನುವುದು ಅವರ ಉದ್ದೇಶ ಅಗಿದ್ದಲ್ಲಿ ಇದು ಸರಿಯಲ್ಲ. ನಮ್ಮ ಅಭಿಪ್ರಾಯ ಈ ಸದನದಲ್ಲಿ ಚರ್ಚೆಗಳು ನಡೆಯಬೇಕೆನ್ನುವುದು. ಆದರೆ ಸರ್ಕಾರ ಮೊಂಡು ಹಠಕ್ಕೆ ಬಿದ್ದು ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ನೀಡದೇ ಉಳಿಯುವುದು

ಸರಿಯಾಗುವುದಿಲ್ಲ. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚಿಸಲು ಆಗುವುದಿಲ್ಲ ಎನ್ನುವುದು ಸರಿಯಲ್ಲ.

(ಗೊಂದಲ)

**ಸಭಾಪತಿಯವರು:–** ಈಗ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಗಳ ತನಕ ಮುಂದೂಡಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ 2 ಗಂಟೆ 22 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ 3 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳುವುದು)**

**(ಭೋಜನ ವಿರಾಮದ ನಂತರ ಸದನವು ಅಪರಾಹ್ನ 3 ಗಂಟೆ 52 ನಿಮಿಷಗಳಿಗೆ ಸಮಾವೇಶಗೊಂಡಿತು. ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು.)**

**ಸಭಾಪತಿಯವರು:–** ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಲು ಇಷ್ಟಪಡುತ್ತಿದ್ದೇನೆ. ಪ್ಲೋರ್ ಲೀಡರ್ಸ್‌ನ ಜೊತೆಗೆ ಸರ್ಕಾರದ ಪರವಾಗಿ ಸಭಾ ನಾಯಕರು ಕುಳಿತು ಬೆಳಿಗ್ಗೆ ಚರ್ಚೆ ಮಾಡಿದಾಗ, ಈ ಮಾತುಕತೆಯಿಂದ ಒಳ್ಳೆಯ ವಾತಾವರಣ ನಿರ್ಮಾಣವಾಗಬಹುದು ಮತ್ತು ಮಧ್ಯಾಹ್ನದೊಳಗೆ ಏನಾದರೂ ನಿರ್ಧಾರಕ್ಕೆ ಬರಬಹುದು ಎನ್ನುವ ಹಿನ್ನೆಲೆಯಲ್ಲಿ ಸಭೆಯನ್ನು ಬೆಳಿಗ್ಗೆ ಮುಂದೂಡಲಾಗಿತ್ತು. ಕೆಳಮನೆಯಲ್ಲಿ ಮಾನ್ಯ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮತ್ತು ವಿರೋಧ ಪಕ್ಷದ ಪ್ರಮುಖರ ಜೊತೆಗೆ ಸಭೆ ನಡೆಸಿ ಏನಾದರೂ ತೀರ್ಮಾನಕ್ಕೆ ಬರಬಹುದು ಎನ್ನುವ ಸುದ್ದಿ ಬಂದ ಹಿನ್ನೆಲೆಯಲ್ಲಿ ಬೆಳಿಗ್ಗೆ ಸಭೆಯನ್ನು ಪುನಃ ಮಧ್ಯಾಹ್ನ 3.30 ಗಂಟೆಗೆ ಕರೆಯಲಾಯಿತು. ಆದರೆ, ಕೆಳಮನೆಯಲ್ಲಿ ಆ ರೀತಿಯ ವಾತಾವರಣ ಇಲ್ಲದೆ ಸಭೆಯನ್ನು ಮತ್ತೆ ಸ್ವಲ್ಪ ಹೊತ್ತಿನ ಕಾಲ ಮುಂದೂಡಿದ್ದಾರೆ. ಆ ಹಿನ್ನೆಲೆಯಲ್ಲಿ ನಮ್ಮ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡಲಾಗುತ್ತಿದೆ.

**(ಸದನವು ಮಧ್ಯಾಹ್ನ 3 ಗಂಟೆ 53 ನಿಮಿಷಗಳಿಗೆ ಮುಕ್ತಾಯಗೊಂಡು, ಪುನಃ ದಿನಾಂಕ 29ನೇ ನವೆಂಬರ್ 2013ರ ಶುಕ್ರವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)**